# ಕರ್ನಾಟಕ ಸರ್ಕಾರ

ಸಂಖ್ಯೆ: ಪಿಯುಇ/ಪಿಎಸ್(ನಿ)/ಸಿ.ವ./2014-15

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ 18ನೇ ಕ್ರಾಸ್,
ಸಂಪಿಗೆ ರಸ್ತೆ, ಬೆಂಗಳೂರು-12.
ದಿನಾಂಕ: 07-01-2015.

## ಜ್ಞಾಪನ

ವಿಷಯ: 2015ರ ಮಾರ್ಚ್‌ನಲ್ಲಿ ನಡೆಯುವ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಕ್ರಮವಹಿಸುವ ಕುರಿತು.

****

ಪದವಿ ಪೂರ್ವ ಶಿಕ್ಷಣ ಇಲಾಖೆಯು ಈಗಾಗಲೇ 2015ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಯ ವೇಳಾಪಟ್ಟಿಯನ್ನು ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಹಾಗೂ ಪ್ರಾಂಶುಪಾಲರಿಗೆ ಕಳುಹಿಸಿರುವುದಲ್ಲದೆ ಇಲಾಖೆಯ ವೆಬ್‌ಸೈಟ್‌ನಲ್ಲು ಸಹ ಪ್ರಕಟಿಸಿದೆ. ಅದರಂತೆ, ದ್ವಿತೀಯ ಪಿಯುಸಿ ಪರೀಕ್ಷೆಯನ್ನು ತಮ್ಮ ಜಿಲ್ಲಾ ಮಟ್ಟದಲ್ಲಿ ಸುಸೂತ್ರ ಹಾಗೂ ಸುಗಮವಾಗಿ ನಡೆಯಲು ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ನಿರ್ದೇಶನವನ್ನು ಚಾಚುತಪ್ಪದೆ ಪಾಲಿಸಲು ಸೂಚಿಸಿದೆ:

1. ಜಿಲ್ಲಾ ಉಪನಿರ್ದೇಶಕರು ತಮ್ಮ ಹಾಗೂ ಎಲ್ಲಾ ಪ್ರಾಂಶುಪಾಲರ ಇ-ಮೇಲ್ ಐಡಿ ಯನ್ನು ಕೂಡಲೇ ಇಲಾಖೆಗೆ ಸಲ್ಲಿಸುವುದು.

2. ಒಂದು ವೇಳೆ ಅಂತರ್ಜಾಲದ ಇ-ಮೇಲ್ ಐಡಿಯನ್ನು ಹೊಂದಿಲ್ಲದಿದ್ದಲ್ಲಿ ಕೂಡಲೇ ಸೃಜಿಸಿ ಇ-ಮೇಲ್ ಐಡಿ ಯನ್ನು ಕಡ್ಡಾಯವಾಗಿ ಬಳಸುವುದು.

3. ಜಿಲ್ಲಾ ಉಪನಿರ್ದೇಶಕರು ಪ್ರತಿ ದಿನ ತಮಗೆ ಬಂದಿರುವ ಇ-ಮೇಲ್‌ಗಳನ್ನು ಅವಲೋಕಿಸಿ ಅದಕ್ಕೆ ಸಂಬಂಧಪಟ್ಟಂತೆ ಕೂಡಲೇ ಪ್ರತಿಕ್ರಿಯೆ ನೀಡುವುದು.

4. ಇಲಾಖೆಯಿಂದ ಜಿಲ್ಲಾ ಉಪನಿರ್ದೇಶಕರಿಗೆ ನೀಡಿರುವ ಬಿಎಸ್‌ಎನ್‌ಎಲ್ ಸಿಯುಜಿ ಸಿಮ್‌ನಲ್ಲಿ ಕಳುಹಿಸುವ ಎಸ್‌ಎಂಎಸ್/Bulk Message Centre ಸಂದೇಶಗಳನ್ನು ತಕ್ಷಣವೇ ನೋಡಿ ಅದರಂತೆ ಕಾರ್ಯೋನ್ಮುಖರಾಗುವುದು.

5. ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಸ್ವೀಕರಿಸಲಾಗುವ ಪ್ರಸ್ತಾವನೆಗಳನ್ನು ಇಲಾಖೆಯಿಂದ ನೀಡುವ ನಮೂನೆಗಳಂತೆ ಮಾಹಿತಿಗಳನ್ನು ಮತ್ತು ದಾಖಲೆಗಳನ್ನು ತಪ್ಪದೆ ತಡಮಾಡದೆ ಸಲ್ಲಿಸುವುದು.

6. ಇಲಾಖೆಯು ಕೋರುವ ಮಾಹಿತಿಯನ್ನು ಮುತುವರ್ಜಿ ವಹಿಸಿ ಸಕಾಲದಲ್ಲಿ ಒದಗಿಸುವುದು.

7. ನಿರ್ದೇಶಕರ ಪೂರ್ವಾನುಮತಿ ಇಲ್ಲದೆ ಯಾರೂ ಯಾವುದೇ ರೀತಿಯ ರಜೆಯನ್ನು ಬಳಸಿಕೊಳ್ಳದಿರಲು ಮತ್ತು ಕೇಂದ್ರಸ್ಥಾನ ಬಿಡದಿರಲು ಸೂಚಿಸಿದೆ.

...2..

ಮೇಲೆ ಸೂಚಿಸಲಾಗಿರುವ ಅಂಶಗಳ ಪಾಲನೆಯಲ್ಲಿ ಯಾವುದೇ ಲೋಪದೋಷಗಳು ಸಂಭವಿಸದಂತೆ ಎಚ್ಚರಿಕೆ ವಹಿಸಿ ಕಾರ್ಯ ನಿರ್ವಹಿಸುವುದು. ಅಲ್ಲದೆ, ಪರೀಕ್ಷಾ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷಗಳಿಗೆ ಆಸ್ಪದ ನೀಡದೆ, ಇಲಾಖೆಯ ಗೌರವಕ್ಕೆ ಧಕ್ಕೆ ಉಂಟಾಗದಂತೆ ಎಚ್ಚರಿಕೆಯಿಂದ ಕ್ರಮವಹಿಸತಕ್ಕದ್ದು.. ಸೂಚಿತ ದಿನಾಂಕದೊಳಗೆ ಮಾಹಿತಿಗಳನ್ನು ಮತ್ತು ಕೋರಲಾಗುವ ದಾಖಲೆಗಳನ್ನು ಒದಗಿಸುವಲ್ಲಿ ವಿಫಲರಾದಲ್ಲಿ ಕರ್ತವ್ಯ ನಿರ್ಲಕ್ಷತೆ ಎಂದು ತೀರ್ಮಾನಿಸಿ ತಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಇದಕ್ಕೆ ಆಸ್ಪದ ನೀಡಬಾರದೆಂದು ಕೋರಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಯನ್ನು ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ – ಅಗತ್ಯ ಕ್ರಮಕ್ಕಾಗಿ,

ಪ್ರತಿಯನ್ನು ಮಾಹಿತಿಗಾಗಿ:
ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.